**ಇಂದು:19-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ: ಶ್ರೀ ಎಂ.ಆರ್.ಎಂ.ಹೆಚ್ ವಕೀಲರಿಂದ ವಾದಿಯ ಪರ:

**ನಾನು, ನನ್ನ ಮುಖ್ಯ ವಿಚಾರಣೆಯ ಅಂಶಗಳನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳು ಸತ್ಯವಾಗಿರುತ್ತವೆ.**

ನಾನು ಒಂದು ವಂಶವೃಕ್ಷದ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಅದನ್ನು ರುಜುವಾತಿಗೆ ಒಳಪಟ್ಟು ಅದನ್ನು ನಿ.ಪಿ-1 ಎಂದು, ಸರ್ವೆ ನಂಬರ್ 18/4, 18/2, 18/3, 18/1 ಇವುಗಳ ಪಹಣಿಗಳನ್ನು ಕ್ರಮವಾಗಿ ನಿ.ಪಿ-2 ರಿಂದ 5 ಎಂದು, ದಿನಾಂಕ:17-03-1985 ರ ಮುಟೇಷನ್ ಎಂಟ್ರಿಯ ದೃ.ನಕಲನ್ನು ನಿ.ಪಿ-6 ಎಂದು, ಸರ್ವೆ ನಂಬರ್ 18 ಪಿ ಇದರ 3 ಕೈಬರಹ ಪಹಣಿಗಳ ದೃ.ನಕಲುಗಳನ್ನು ಕ್ರಮವಾಗಿ ನಿ.ಪಿ-7 ರಿಂದ 9 ಎಂದು, ಸರ್ವೆ ನಂಬರ್ 18/3 ರ ಒಂದು ಕೈಬರಹ ಪಹಣಿಯನ್ನು ನಿ.ಪಿ-10 ಎಂದು ಗುರುತಿಸಲಾಯಿತು.

ಸರ್ವೆ ನಂಬರ್ 18/ಪಿ ಇದರ ಇನ್ನು ಎರಡು ಕೈಬರಹ ಪಹಣಿಗಳ ದೃ.ನಕಲುಗಳನ್ನು ಕ್ರಮವಾಗಿ ನಿ.ಪಿ-11 ಮತ್ತು 12 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**